ದಿನಾಂಕ 29-10-2018 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟಿ ಸವಾಲು : ಶ್ರೀ ಹೆಚ್ ಎಂ ಕೆ ವಕೀಲರಿಂದ

- - - - -

ನನ್ನ ತಾಯಿ ಲಿಂಗಮ್ಮ ಮತ್ತು ಐಯಪ್ಪನವರಿಗೆ ಒಟ್ಟು 4 ಜನ ಮಕ್ಕಳು ಇರುತ್ತೇವೆ. ಅದರಲ್ಲಿ ಮೂರು ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ನನ್ನ ತಂದೆಯವರಿಗೆ ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇವೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಇನ್ನು ಮೂರು ಎಕರೆ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ. ಅದರ ಸರ್ವೆ ನಂಬರ ಹೇಳಲು ಬರುವುದಿಲ್ಲ. ಸದರಿ ಸ್ವತ್ತುಗಳನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಒಟ್ಟು ಕುಟುಂಬದ ಆಸ್ತಿಗಳಲ್ಲಿ ನಾವು ಭಾಗ ಮಾಡಿಕೊಂಡಿರುತ್ತೇವೆ. ಅದಕ್ಕೆ ಸಂಬಂಧಿಸಿದಂತೆ ಪತ್ರ ಬರವಣಿಗೆಯಾಗಿರುವುದಿಲ್ಲ ಬಾಯಿ ಮಾತಿನ ಮೂಲಕವಾಗಿರುತ್ತದೆ. ಯಾರಿಗೆ ಯಾವ ಭಾಗ ಬಂದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ಸ್ವಲ್ಪ ಸ್ವಲ್ಪ ಜಮೀನನ್ನು ಮಾಡುತ್ತಿದ್ದೇವೆಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಬಂದ ಜಮೀನುಗಳು ಬೇರೆ ಬೇರೆ ಇರುತ್ತವೆ. ಅದರಲ್ಲಿ ಯಾರಾರಿಗೆ ಯಾವ ದಿಕ್ಕಿನಲ್ಲಿ ಬಂದಿದೆ ಎಂದು ಹೇಳಲಾಗುವುದಿಲ್ಲ. ನಾವು ಸುಮಾರು 20 ವರ್ಷದಿಂದ ಬಾಯಿಮಾತಿನ ಮೂಲಕ ಭಾಗ ಮಾಡಿಕೊಂಡು ಬೇರೆ ಬೇರೆಯಾಗಿ ವ್ಯವಸಾಯ ಮಾಡುತ್ತಿದ್ದೇವೆ. ನಮ್ಮ ಕುಟುಂಬದ ವ್ಯವಹಾರಗಳನ್ನು ಪ್ರತ್ಯೇಕವಾಗಿ ಮಾಡುತ್ತಿದ್ದೇವೆಂದರೆ ಸರಿ. ಸದರಿ ಬಾಯಿಮಾತಿನ ವಿಭಾಗದಲ್ಲಿ ಪಕೀರಮ್ಮನವರಿಗೆ ಯಾವುದೇ ಭಾಗ ನೀಡಿರುವುದಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕ ಮನೆ ಇರುತ್ತದೆ. ದಾವಾ 1 ನೇ ಸ್ವತ್ತನ್ನು ನಾವು ಬಾಯಿ ಮಾತಿನ ಮೂಲಕ ಭಾಗ ಮಾಡಿಕೊಂಡ ಸಮಯದಲ್ಲಿ ಭಾಗ ಮಾಡಿಕೊಂಡಿರುವುದಿಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಮಾಡುವ ಸಮಯದಲ್ಲಿ ತಕರಾರು ನೀಡಿರುತ್ತೇವೆ ಆದರೂ ಕೂಡಾ ಅವರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ಸದರಿ ತಕರಾರನ್ನು ನನ್ನ ಮಗ ರಾಮಾಂಜನಿ ನೀಡಿರುತ್ತಾರೆ. ಅದರ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಕುರಿತಂತೆ ನಾವು ಸುಳ್ಳು ಹೇಳುತ್ತಿದ್ದೇವೆಂದರೆ ಸರಿಯಲ್ಲ. 1996 ರಲ್ಲಿ ನನ್ನ ತಾಯಿ ಲಿಂಗಮ್ಮ 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರದ ಮೂಲಕ ದಾವಾ ಸ್ವತ್ತುಗಳನ್ನು ಬಿಟ್ಟು ಕೊಟ್ಟಿದ್ದರು ಎಂದರೆ ಸರಿಯಲ್ಲ.

ಆ ಕಾರಣದಿಂದ ನಮ್ಮ ಬಾಯಿ ಮಾತಿನ ವಿಭಾಗದಲ್ಲಿ ದಾವಾ ಸ್ವತ್ತುಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಲಿಂಗಮ್ಮನವರು ಹನುಮಂತಪ್ಪನವರ ಮನೆಯಲ್ಲಿ ಹೆಚ್ಚಾಗಿ ಇರುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಮನೆಗೂ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ತಾಳೂರು ಗ್ರಾಮದವರು ಎಂದರೆ ಸರಿ. ನನ್ನ ತಾಯಿಯು 1 ನೇ ಪ್ರತಿವಾದಿಯ ಸೋದರತ್ತೆ ಎಂದರೆ ಸರಿ. ಆ ಕಾರಣದಿಂದ 1 ನೇ ಪ್ರತಿವಾದಿಯು ನನ್ನ ತಾಯಿಯನ್ನು ನೋಡಿಕೊಂಡಿದ್ದರಿಂದ ನನ್ನ ತಾಯಿಯು 1 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ.

ದಾವಾ 1 ನೇ ಸ್ವತ್ತು ಜೋಗದ ದಾರಿಯಲ್ಲಿ ಬರುತ್ತದೆ. ಅದರ ಚೆಕ್ಕ ಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ 1 ನೇ ಸುತ್ತಿನಲ್ಲಿ ನಾವು ಯಾವತ್ತು ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯವರು 1 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ಬಿಟ್ಟುಕೊಟ್ಟ ಬಗ್ಗೆ ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಹಾವಿನಾಳ ಗ್ರಾಮದ ಸರ್ವೆ ನಂಬರ 110/ಸಿ ಜಮೀನು ನಮಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಜಮೀನು 4 ಎಕರೆ 33 ಸೆಂಟ್ಸ ಇದೆ ಎಂದರೆ ಸರಿ. ಹಾವಿನಾಳ ಗ್ರಾಮದ ಸರ್ವೆ ನಂಬರ 201/ಬಿ3 ಜಮೀನು ನಮಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಜಮೀನು 1 ಎಕರೆ 62 ಸೆಂಟ್ಸ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ಸದರಿ ಜಮೀನು ನನ್ನ ಸಹೋದರರೊಂದಿಗೆ ಜಂಟಿಯಾಗಿರುತ್ತವೆಂದು ನುಡಿಯುತ್ತಾರೆ. ಹಾವಿನಾಳ ಗ್ರಾಮದ ಸರ್ವೆ ನಂಬರ 208/ಇ ಜಮೀನು 03 ಸೆಂಟ್ಸ ಇದ್ದು ನನ್ನ ಭಾಗದಲ್ಲಿದೆ ಎಂದರೆ ಸರಿ. ಹಾವಿನಾಳ ಗ್ರಾಮದ ಸರ್ವೆ ನಂಬರ 342/ಸಿ ಜಮೀನು 01 ಎಕರೆ 55 ಸೆಂಟ್ಸ ಇದ್ದು ನನ್ನ ಭಾಗದಲ್ಲಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಹಾವಿನಾಳ ಗ್ರಾಮದ ಸರ್ವೆ ನಂಬರ 343/ಎ ಜಮೀನು 30 ಸೆಂಟ್ಸ ಇದ್ದು ನನ್ನ ಭಾಗದಲ್ಲಿದೆ ಎಂದರೆ ಸರಿ. ಹಾವಿನಾಳ ಗ್ರಾಮದ ಸರ್ವೆ ನಂಬರ 343/ಬಿ ಜಮೀನು 61 ಸೆಂಟ್ಸ ಇದ್ದು ನನ್ನ ಭಾಗದಲ್ಲಿದೆ ಎಂದರೆ ಸರಿ. ಹಾವಿನಾಳ ಗ್ರಾಮದ ಸರ್ವೆ ನಂಬರ 78/ಎ ಜಮೀನು 1 ಎಕರೆ 14 ಸೆಂಟ್ಸ ಇದ್ದು ನನ್ನ ಭಾಗದಲ್ಲಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಹಾವಿನಾಳ ಗ್ರಾಮದ ಸರ್ವೆ ನಂಬರ 208/ಒ ಜಮೀನು 05 ಸೆಂಟ್ಸ ಇದ್ದು ನನ್ನ ಭಾಗದಲ್ಲಿದೆ ಎಂದರೆ ಬಂದಿರಬಹುದು ಎಂದು ನುಡಿಯುತ್ತಾರೆ.

ಒಟ್ಟು ಹಾವಿನಾಳ ಗ್ರಾಮದಲ್ಲಿ ನನ್ನ ಭಾಗಕ್ಕೆ ಒಟ್ಟು 5 ಎಕರೆ 63 ಸೆಂಟ್ಸ ಜಮೀನು ಬಂದಿದೆ ಎಂದರೆ ಸರಿ. ಅದೇ ರೀತಿ ಕರಿಯಪ್ಪನವರಿಗೂ 5 ಎಕರೆ 63 ಸೆಂಟ್ಸ ಹಾವಿನಾಳ ಗ್ರಾಮದಲ್ಲಿ ಬಂದಿದೆ ಎಂದರೆ ಸರಿ. ಆ ಸಮಯದಲ್ಲಿ ತಾಳೂರಿನಲ್ಲಿ ನಮ್ಮ ಒಟ್ಟು ಕುಟುಂಬದ ಆಸ್ತಿ ಇರುವ ಬಗ್ಗೆ ನಮ್ಮ ತಾಯಿ ಹೇಳಿರುತ್ತಾರೆ. ನನ್ನ ತಾಯಿಯವರು 1 ನೇ ಪ್ರತಿವಾದಿಗೆ ಬರೆದುಕೊಟ್ಟ ಪತ್ರವನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ, ಸಾಕ್ಷಿ ಮುಂದುವರಿದು ನನ್ನ ತಾಯಿ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾವಾ 1 ನೇ ಸ್ವತ್ತನ್ನು 1 ನೇ ಪ್ರತಿವಾದಿಯು ಅಭಿವೃದ್ಧಿಪಡಿಸಿರುವುದರಿಂದ ಅದನ್ನು ಪಡೆದುಕೊಳ್ಳಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವೆ ಸಲ್ಲಿಸಲು ನಾನು ಮತ್ತು ಉಳಿದ ವಾದಿಗಳು ಸೇರಿ ಮಾಹಿತಿ ನೀಡಿರುತ್ತೇವೆ. ಪಕೀರಮ್ಮನವರಿಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಈ ಕುರಿತಂತೆ ನನಗೆ ಮಾಹಿತಿ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟ ನಂತರ ದಾವಾ ಸ್ವತ್ತುಗಳ ಮಾಲಿಕರಾಗಿದ್ದಾರೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ; ಸಂಡೂರು.